739 (382) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆನ್ನುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ಎಲ್ಲೆಲ್ಲಿ ಸ್ಥಳಗಳನ್ನು ಗುರುತಿಸಲಾಗಿದೆ ;

ಇ) ಇದಕ್ಕಾಗಿ ಈ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು ?

ಶ್ರೀ ಶಿವಾನಂದ ಎಸ್. ನಾಯಕ್ (ಸಣ್ಣ ಕೈಗಾರಿಕೆ ಸಚಿವರು):

ಅ) ಸಣ್ಣ ಕೈಗಾರಿಕೆಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡುವ ಪ್ರಸ್ತಾವನೆಯು ಇರುವುದಿಲ್ಲ. ಡಾ: ಡಿ.ಎಂ. ನಂಜುಂಡಪ್ಪ ರವರ ವರದಿಯಂತೆ ಕೂಡ್ಲಗಿ ತಾಲ್ಲೂಕನ್ನು ಅತೀ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಕೆ.ಎಸ್.ಹೆಚ್.ಡಿ.ಸಿ. ವತಿಯಿಂದ ಗೊಂಚಲು ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ತರಬೇತಿ, ಸಾಮೂಹಿಕ ಕಾರ್ಯಾಗಾರಗಳು ಮತ್ತು ಯಂತ್ರಗಳನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) ಕೆ.ಎಸ್.ಹೆಚ್.ಡಿ.ಸಿ. ವತಿಯಿಂದ ಅರವತ್ತು ಜನರಿಗೆ ಮೋತಿಕಲ್ ತಾಂಡ್ಯ, ಸಿ.ಜಿ. ಹಳ್ಳಿ ತಾಂಡ್ಯ, ಶ್ರೀಕಂಠಪುರ ತಾಂಡ್ಯಗಳಲ್ಲಿ ಕಸೂತಿ ಮತ್ತು ಕನ್ನಡಿ ಕೆಲಸದಲ್ಲಿ ತರಬೇತಿ ನೀಡಲಾಗಿದೆ.

ಇ) ಇದಕ್ಕಾಗಿ ರೂ. 10.00 ಲಕ್ಷಗಳನ್ನು 2005–06ನೇ ಸಾಲಿನಲ್ಲಿ ನೀಡಲಾಗಿದೆ.

740 (1205) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಬಿದ್ದ ಭಾರಿ ಮಳೆಯಿಂದ ನಷ್ಟವಾಗಿರುವ ಪ್ರಮಾಣ ಎಷ್ಟು ; (ತಾಲ್ಲೂಕುವಾರು ಜಿಲ್ಲೆಯ ಪೂರ್ಣ ವಿವರ ನೀಡುವುದು) ;

ಆ) ಸರ್ಕಾರ ಮಳೆ ಹಾನಿ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಿದೆಯೇ ;

ಇ) ಎಷ್ಟು ಹಣ ಬಿಡುಗಡೆ ಮಾಡಿದೆ ಹಾಗೂ ಇದರಲ್ಲಿ ಯಾವ ಯಾವ ಕೆಲಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ;

ಈ) ಹಾಗಿದ್ದಲ್ಲಿ, ಅತೀವೃಷ್ಟಿ ಮಳೆ ಪರಿಹಾರವನ್ನು ಅನುಷ್ಠಾನಗೊಳಿಸಲು ಇರುವ ಮಾನದಂಡಗಳೇನು ;

ಉ) ಇದಕ್ಕೆ ಸರ್ಕಾರ ಸಮಿತಿಯನ್ನು ರಚಿಸಿದೆಯೇ ;

ಊ) ಈ ಸಮಿತಿಗಳು ತಾಲ್ಲೂಕುವಾರು ಇದೆಯೇ ಅಥವಾ ವಿಧಾನಸಭಾ ಕ್ಷೇತ್ರವಾರು ಇದೆಯೇ ;

ಋ) ಈ ಉಸ್ತುವಾರು ಸಮಿತಿಯಲ್ಲಿ ಶಾಸಕರ ಪಾತ್ರವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) 2005–06ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಬಿದ್ದ ಭಾರಿ ಮಳೆಯಿಂದ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿಗಳಿಗೆ ಒಟ್ಟಾಗಿ ರೂ. 6055.03 ಲಕ್ಷ ನಷ್ಟ ಸಂಭವಿಸಿದ್ದು ತಾಲ್ಲೂಕುವಾರು ಕೆಳಕಂಡಂತಿದೆ.

ಮಡಿಕೇರಿ	ರೂ. 1468.14 ಲಕ್ಷ
ಸೋಮವಾರಪೇಟೆ	ರೂ. 2559.76 ಲಕ್ಷ
ವಿರಾಜಪೇಟೆ	ರೂ. 1163.50 ಲಕ್ಷ

ಆ) ಮಾಡಿದೆ.

ಇ) 2005–06ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರಗಳಿಗೆ ಕೊಡಗು ಜಿಲ್ಲೆಗೆ ರೂ. 1436.80 ಲಕ್ಷ ಅನುದಾನ ಬಿಡುಗಡೆ ಮಾಡಿದೆ. ಇದರಲ್ಲಿ ಬೆಳೆ ಹಾನಿಗೆ ಪರಿಹಾರ ನೀಡಲಾಗಿದೆ. ಮಾನವ ಜೀವಹಾನಿಗೆ ಪರಿಹಾರ ನೀಡಲಾಗಿದೆ. ಹಾಗೂ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದ ಪಿಕಪ್ ದುರಸ್ತಿ, ತಡೆಗೋಡೆ, ಅಂತರ್‌ಜಲ ಹೆಚ್ಚಿಸುವ ಕಾಮಗಾರಿಗಳು, ರಸ್ತೆ ದುರಸ್ತಿ, ಮೋರಿ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಈ) ಕೇಂದ್ರ ಸರ್ಕಾರದ CRF/NCCF ಮಾರ್ಗಸೂಚಿಗಳನ್ವಯ ಪರಿಹಾರ ನೀಡಲಾಗಿದೆ ಹಾಗೂ ಬೆಳೆ ಪರಿಹಾರವನ್ನು ದ್ವಿಗುಣ ದರದಲ್ಲಿ ನೀಡಿದೆ.

ಉ) ಹೌದು.

ಊ) ತಾಲ್ಲೂಕುಮಟ್ಟದ ಪ್ರಕೃತಿ ವಿಕೋಪ ಪರಿಹಾರ ಸಮಿತಿಯನ್ನು ರಚಿಸಲಾಗಿದೆ. ವಿಧಾನಸಭಾ ಕ್ಷೇತ್ರವಾರು ಸಮಿತಿ ಇರುವುದಿಲ್ಲ.

ಋ) ತಾಲ್ಲೂಕು ಮಟ್ಟದ ಸಮಿತಿಯಲ್ಲಿ

(i) ಬಿಡುಗಡೆಯಾದ ಅನುದಾನಕ್ಕೆ ತಕ್ಕಂತೆ ಪ್ರಕೃತಿ ವಿಕೋಪ ಕಾಮಗಾರಿಗಳಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿಗಳನ್ವಯ ಕ್ರಿಯಾ ಯೋಜನೆ ತಯಾರಿಸುವುದು.

(ii) ಗಂಜಿ ಕೇಂದ್ರ/ಗೋಶಾಲೆ ತೆರೆಯಲು ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸ್ಸು ಮಾಡುವುದು.

(iii) ಪ್ರಕೃತಿ ವಿಕೋಪ ಕಾಮಗಾರಿಗಳ ಅನುಷ್ಠಾನ ಹಾಗೂ ಉಸ್ತುವಾರಿ ಇತ್ಯಾದಿ ಕಾರ್ಯಗಳನ್ನು ಮಾಡುತ್ತಾರೆ.

741 (1151) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗಾ): ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಹಿಂದುಳಿದ ಗುಲ್ಬರ್ಗಾ ಜಿಲ್ಲೆಯ ಅಭಿವೃದ್ಧಿಗಾಗಿ ವಿಶೇಷ ಆರ್ಥಿಕ ವಲಯ ಸ್ಥಾಪಿಸಿ ಅಭಿವೃದ್ಧಿಪಡಿಸಲು ಸರ್ಕಾರ ಎಷ್ಟು ಹಣ ಮೀಸಲಿಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ;